**ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸದುರ್ಗ.**

**ಉಪಸ್ಥಿತರುಃ-** ಶ್ರೀ ವೈ. ಕೆ. ಬೇನಾಳ, ಬಿ.ಎ., ಎಲ್.ಎಲ್.ಬಿ., (ಆನರ್ಸ್),
ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,
ಹೊಸದುರ್ಗ.

**ದಿನಾಂಕ 8 ನೇ ಸೆಪ್ಟಂಬರ್ 2025**

**ಅಸಲು ದಾವೆ ಸಂಖ್ಯೆಃ 49/2019**

**ವಾದಿ -**

ಎನ್.ಪಿ. ವೀರಭದ್ರಪ್ಪ

**ವಿರುದ್ಧ**

**ಪ್ರತಿವಾದಿಗಳು -**

ಎನ್.ಪಿ ಚಂದ್ರಶೇಖರಪ್ಪ ಮೃತಪಟ್ಟಿದ್ದು ಅವನ
ವಾರಸುದಾರರು 1(ಎ) ಹೆಚ್ ಶಿವಲೀಲ ಮತ್ತು ಇತರರು

**ಮಧ್ಯಂತರ ಅರ್ಜಿ ಸಂಖ್ಯೆ-10**

**ಅರ್ಜಿದಾರ / ವಾದಿ**

ಎನ್.ಪಿ. ವೀರಭದ್ರಪ್ಪ ತಂದೆ ಎನ್.ಸಿ. ಪರಪ್ಪ,
ವಯಸ್ಸು ಸುಮಾರು 67 ವರ್ಷ,,
ವ್ಯವಸಾಯ,
ವಾಸಃ ಗುಡ್ಡದನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು,
ಚಿತ್ರದುರ್ಗ ಜಿಲ್ಲೆ.

**(ಅರ್ಜಿದಾರನ ಪರ ವಕೀಲರು - ಶ್ರೀ ಎಂ.ಎಸ್.ಸದ್ಯೋಜಾತ)**

**ವಿರುದ್ಧ**

**ಎದುರುದಾರರು / ಪ್ರತಿವಾದಿಗಳು**

1(ಎ) ಶ್ರೀಮತಿ ಹೆಚ್. ಶಿವಲೀಲಾ ಗಂಡ ಎನ್.ಪಿ ಚಂದ್ರುಶೇಖರಪ್ಪ,
ವಯಸ್ಸು ಸುಮಾರು 63 ವರ್ಷ,
ಮನೆಗೆಲಸ,
ವಾಸಃ ಗುಡ್ಡದ ನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

2. ಶ್ರೀಮತಿ ರೇಣುಕಮ್ಮ ಗಂಡ ಎನ್.ಪಿ ಪ್ರಕಾಶ್,
ವಯಸ್ಸು ಸುಮಾರು 55 ವರ್ಷ,
ವಾಸಃ ಗುಡ್ಡದ ನೇರಳಕೆರೆ ಗ್ರಾಮ,
ಮತ್ತೋಡು ಹೋಬಳಿ,
ಹೊಸದುರ್ಗ ತಾಲ್ಲೂಕು.

3. ಡಾಃ ಎನ್.ಪಿ ಗುರುಪ್ರಸಾದ್ ತಂದೆ ಎನ್.ಪಿ ಪ್ರಕಾಶ್,
ವಯಸ್ಸು ಸುಮಾರು 30 ವರ್ಷ,
ವಾಸಃ #151, 4 ನೇ ಕ್ರಾಸ್, 2 ನೇ ಮುಖ್ಯ ರಸ್ತೆ,
3 ನೇ ಹಂತ, ಚನ್ನಮ್ಮನಕೆರೆ ಅಚಕಟ್ ಬಸ್ ನಿಲ್ದಾಣದ ಹಿಂಭಾಗ,
ಬನಶಂಕರಿ, 3 ನೇ ಹಂತ, ಬೆಂಗಳೂರು.

4. ಶ್ರೀಮತಿ ಎನ್.ಪಿ ರೂಪಶಿರ ಗಂಡ ಪ್ರಮೋದ್,
ವಯಸ್ಸು ಸುಮಾರು 28 ವರ್ಷ,
ವಾಸಃ #8, ಎಸ್-01, 5 ನೇ ಕ್ರಾಸ್, ರಾಯಲ್ ಹೆರಿಟೇಜ್ ಬಡಾವಣೆ,
ಶೆರೆವುಡ್ ಹೈಸ್ಕೂಲ್, ಬನ್ನೇರುಘಟ್ಟ ರಸ್ತೆ ಎದುರು,
ಬೆಂಗಳೂರು.

5. ಶ್ರೀಮತಿ ಎನ್.ಪಿ ರಾಜೇಶ್ವರಿ ಗಂಡ ಎಂ.ಕೆ ದಯಾನಂದ್ ,
ವಯಸ್ಸು ಸುಮಾರು 52 ವರ್ಷ, ಮನೆಗೆಲಸ,
ವಾಸಃ ಮಾಯಕೊಂಡ ಗ್ರಾಮ,
ದಾವಣಗೆರೆ ತಾಲ್ಲೂಕು.

**(1(ಎ) ಎದುರುದಾರಳ ಪರ ವಕೀಲರು - ಶ್ರೀ ಸಿ. ಬಸವರಾಜು)**
**(2 ರಿಂದ 4 ನೇ ಎದುರುದಾರರ ಪರ ವಕೀಲರು - ಶ್ರೀ ಜಿ. ನಿಂಗಪ್ಪ )**
**(5 ನೇ ಎದುರುದಾರಳ ಪರ ವಕೀಲರು - ಶ್ರೀ ಹೆಚ್ ಗೋಪಾಲಕೃಷ್ಣ )**

**ಮಧ್ಯಂತರ ಅರ್ಜಿ ಸಂಖ್ಯೆ 10 ರ ಮೇಲೆ ಆದೇಶ**

ಅರ್ಜಿದಾರ/ವಾದಿ ಈ ಮಧ್ಯಂತರ ಅರ್ಜಿ ಸಂಖ್ಯೆ 10 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಅಡಿಯಲ್ಲಿ ಸಲ್ಲಿಸಿ, ಈ ದಾವೆಯನ್ನು ಮೂಲ ದಾವೆ ನಂ-164/2024 ರೊಂದಿಗೆ ಒಟ್ಟುಗೂಡಿಸಬೇಕೆಂದು ಕೋರಿರುತ್ತಾನೆ.

**2.** ಈ ಮಧ್ಯಂತರ ಅರ್ಜಿಯನ್ನು ವಾದಿ ತನ್ನ ಪ್ರಮಾಣಪತ್ರದೊಂದಿಗೆ ಸಲ್ಲಿಸಿ, ಅದರಲ್ಲಿ ವಿವರವಾದ ಕಾರಣವನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾನೆ.

**3.** 1(ಎ) ನೇ ಎದುರುದಾರಳು /1(ಎ)ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಗೆ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ ವಿವರವಾದ ಕಾರಣಗಳನ್ನು ಹೇಳಿ, ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕು ಎಂದು ಪ್ರಾರ್ಥಿಸಿಕೊಂಡಿರುತ್ತಾಳೆ.

**4.** ಉಭಯಪಕ್ಷಗಾರರ ಪರ ವಕೀಲರ ವಾದವನ್ನು ಆಲಿಸಲಾಯಿತು.

**5.** ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ-

ಅಂಶ-1 - ಅರ್ಜಿದಾರ/ವಾದಿ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ, ಈ ದಾವೆಯನ್ನು ಮೂಲ ದಾವೆ ನಂ-164/2024 ರೊಂದಿಗೆ ಒಟ್ಟುಗೂಡಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾನೆಯೇ?

ಅಂಶ- 2- ಯಾವ ಆದೇಶ?

**6.** ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ-

ಅಂಶ-1 - ನಕಾರಾತ್ಮಕವಾಗಿ ಮತ್ತು,

ಅಂಶ-2 - ಅಂತಿಮ ಆದೇಶದಂತೆಃ

**ಕಾರಣಗಳು**

**7.** **ಅಂಶ-1 –** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳಲ್ಲಿ ತನಗೆ ¼ ಭಾಗ ಮತ್ತು ಅವುಗಳ ಪ್ರತ್ಯೇಕ ಸ್ವಾಧೀನತೆಯನ್ನು ಕೊಡಿಸಬೇಕೆಂದು ಕೋರಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುವ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುತ್ತಾನೆ. ಈಗ 1 ನೇ ಪ್ರತಿವಾದಿ ಮೃತಪಟ್ಟಿದ್ದರಿಂದ ಅವನ ವಾರಸುದಾರಳಾದ ಅರ್ಜಿದಾರಳು/1(ಎ)ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಲಿಖಿತ ಹೇಳಿಕೆಯನ್ನು ಅಳವಡಿಸಿಕೊಂಡಿರುತ್ತಾಳೆ. ಈಗ ವಾದಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಈ ದಾವೆಯನ್ನು ಮೂಲ ದಾವೆ ನಂ-164/2024 ರೊಂದಿಗೆ ಒಟ್ಟುಗೂಡಿಸಬೇಕೆಂದು ಕೋರಿರುತ್ತಾನೆ.

**8.** ಅರ್ಜಿದಾರ/ ವಾದಿ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, ಮೂಲ ದಾವೆ ನಂ-164/2024 ರಲ್ಲಿ ಈ ವಾದಿ 2 ನೇ ಪ್ರತಿವಾದಿ ಇದ್ದು, ಸದರಿ ದಾವೆಯಲ್ಲಿನ ಪಕ್ಷಗಾರರು ಮತ್ತು ಈ ದಾವೆಯಲ್ಲಿನ ಪಕ್ಷಗಾರರು ಒಂದೇ ಇದ್ದು ಹಾಗೂ ಪರಿಹಾರವು ಒಂದೇ ಇರುವುದರಿಂದ, ನ್ಯಾಯಾಲಯವು ಬೇರೆ ಬೇರೆ ಅಭಿಪ್ರಾಯಕ್ಕೆ ಬರುವುದನ್ನು ತಪ್ಪಿಸುವ ಸಲುವಾಗಿ, 2 ದಾವೆಗಳನ್ನು ಒಟ್ಟುಗೂಡಿಸುವುದು ಅವಶ್ಯವಾಗಿರುತ್ತದೆ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸುವುದರಿಂದ ಎದುರುದಾರರಿಗೆ ಯಾವುದೇ ರೀತಿಯ ನಷ್ಟ ಹಾಗೂ ಅನ್ಯಾಯ ಉಂಟಾಗುವುದಿಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ತಮ್ಮ ವಾದವನ್ನು ಮಂಡಿಸಿರುತ್ತಾರೆ.

**9.** ಎದುರುದಾರಳ/ 1 ನೇ ಪ್ರತಿವಾದಿಯ ಪರ ವಕೀಲರು ತಮ್ಮ ವಾದವನ್ನು ಮಂಡಿಸುತ್ತಾ, 5 ನೇ ಪ್ರತಿವಾದಿಯು ತನ್ನ ಪರ ವಕೀಲರನ್ನು ಬದಲಾಯಿಸಿದ ನಂತರ, ಈ ದಾವೆಯ ಪ್ರಕ್ರಿಯೆಗಳು ಗೊತ್ತಿದ್ದರೂ ಸಹ, ಹೊಸದಾಗಿ ಪಾಲು ವಿಭಾಗ ಕೋರಿ ಮೂಲ ದಾವೆ ನಂ-164/2024 ನ್ನು ಸಲ್ಲಿಸಿರುವುದರಿಂದ, ಸದರಿ ಹೊಸ ದಾವೆಯು ಕಾನೂನು ಪ್ರಕಾರ ಊರ್ಜಿತವಾಗಿರುವುದಿಲ್ಲ. ವಾದಿಯು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಕಾಲಪರಿಮಿತಿಯ ಒಳಗೆ ಇರುವುದಿಲ್ಲ. ವಾದಿ ಕೇವಲ ದಾವೆಯ ಪ್ರಕ್ರಿಯೆಯನ್ನು ಮುಂದೂಡುವ ಸಲುವಾಗಿ ಈ ರೀತಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಈ ಮಧ್ಯಂತರ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು, ತಮ್ಮ ವಾದವನ್ನು ಮಂಡಿಸಿರುತ್ತಾರೆ.

**10.** ವಾದಿ ತನ್ನ ವಾದ ಪತ್ರದಲ್ಲಿ, ದಾವಾ ಆಸ್ತಿಗಳು ಪಿತ್ರಾರ್ಜಿತವಾದ ಜಂಟಿ ಕುಟುಂಬದ ಆಸ್ತಿಗಳೆಂದು ಆರೋಪಿಸಿರುತ್ತಾನೆ. ಆದರೆ, 1 ನೇ ಪ್ರತಿವಾದಿ ತನ್ನ ಲಿಖಿತ

ಹೇಳಿಕೆಯಲ್ಲಿ, ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳಾಗಿದ್ದು, ಅವುಗಳನ್ನು ದಿನಾಂಕಃ 28-07-1983 ರ ನೊಂದಣಿಯಾಗದೇ ಇರುಮ ಪಾಲುವಿಭಾಗ ಪತ್ರದ ಮೂಲಕ ಪಡೆದುಕೊಂಡಿರುವುದರಿಂದ ವಾದಿಗೆ ಈ ದಾವೆಯನ್ನು ಸಲ್ಲಿಸಲು ಯಾವುದೇ ಹಕ್ಕು ಇರುವುದಿಲ್ಲ ಮತ್ತು ವಾದಿ ಯಾವುದೇ ಪಾಲು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಪಡೆಯಲು ಅರ್ಹನಲ್ಲವೆಂದು ತನ್ನ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದರಿಂದ, ಈ ದಾವೆಯಲ್ಲಿ ಉಭಯಪಕ್ಷಗಾರರ ಮಧ್ಯೆ ನಿಜವಾಗಿಯೂ ವಿವಾದದಲ್ಲಿರುವ ಪ್ರಶ್ನೆಗಳೆಂದರೆ ದಾವಾ ಆಸ್ತಿಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಗಳ ಪಿತ್ರಾರ್ಜಿತ ಜಂಟಿ ಕುಟುಂಬದ ಆಸ್ತಿಗಳೋ ಅಥವಾ 1 ನೇ ಪ್ರತಿವಾದಿ ತನ್ನ ಲಿಖಿತ ಹೇಳಿಕೆಯಲ್ಲಿ ಹೇಳಿದಂತೆ ದಿನಾಂಕಃ 28-07-1983 ರಲ್ಲಿ ಪಾಲುವಿಭಾಗವಾಗಿ ಅದರಂತೆ, ತಮ್ಮ ಹಿಸ್ಸೆಯ ಪ್ರತ್ಯೇಕ ಸ್ವಾಧೀನ ಹೊಂದಿರುತ್ತಾರೋ ಅಥವಾ ಇಲ್ಲ ಎನ್ನುವುದಾಗಿರುತ್ತದೆ. ಆದರೆ ಅರ್ಜಿದಾರ/ ವಾದಿಯು ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸುವುದರ ಮೂಲಕ ಈ ದಾವೆಯನ್ನು ಮೂಲ ದಾವೆ ನಂ-164/2024 ರೊಂದಿಗೆ ಒಟ್ಟುಗೂಡಿಸಬೇಕೆಂದು ಕೋರಿರುತ್ತಾನೆ. ಆದರೆ, ಈ ದಾವೆ 2019 ನೇ ಸಾಲಿನಲ್ಲಿ ಸಲ್ಲಿಸಿದಂತಹ ದಾವೆಯಾಗಿದ್ದು, 5 ವರ್ಷ ಹಳೆಯಾದಾದ ದಾವೆಯಾಗಿದ್ದು, ಈ ದಾವೆಯಲ್ಲಿ ಈಗಾಗಲೇ ಪಿಡಬ್ಲೂ-1 ರವರ ಸಾಕ್ಷಿ ವಿಚಾರಣೆಯಾಗಿರುವುದರಿಂದ ಹಾಗೂ ಪ್ರತಿವಾದಿಗಳ ಪರ ಸಾಕ್ಷಿ ವಿಚಾರಣೆಗೆಂದು ಪ್ರಕ್ರಿಯೇ ಇರುವುದರಿಂದ ಹಾಗೂ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವ ಮೂಲ ದಾವೆ ನಂ-164/2024 ನ್ನು 2024 ನೇ ಸಾಲಿನಲ್ಲಿ ಸಲ್ಲಿಸಿರುವುದರಿಂದ ಸದರಿ ದಾವೆ ಇನ್ನು ಹೊಸದಾವೆ ಇರುವುದರಿಂದ, ಸದರಿ ದಾವೆಯೊಂದಿಗೆ ಈ ದಾವೆಯನ್ನು ಒಟ್ಟುಗೂಡಿಸಿದರೆ, ಈ ದಾವೆಯನ್ನು ಬೇಗನೇ ಇತ್ಯರ್ಥಪಡಿಸಲು ಸಾಧ್ಯವಾಗುವುದಿಲ್ಲ. ಅಲ್ಲದೆ, ಈ ದಾವೆ ಮತ್ತು ಆ ದಾವೆಯಲ್ಲಿನ ಪರಿಹಾರಗಳು ಪಾಲುವಿಭಾಗಕ್ಕಾಗಿ

ಇರುವುದರಿಂದ ಮತ್ತು 2 ದಾವೆಗಳಲ್ಲಿನ ಪಕ್ಷಗಾರರು ಅವರೇ ಇರುವ ಕಾರಣ, ಈ ದಾವೆಯಲ್ಲಿಯೇ ಉಭಯಪಕ್ಷಗಾರರ ಮಧ್ಯೆ ಇರುವ ಎಲ್ಲಾ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ಹಾಗು ಅಂತಿಮವಾಗಿ ಇತ್ಯರ್ಥಪಡಿಸಬಹುದಾಗಿರುವುದರಿಂದ, ಈ ದಾವೆಯನ್ನು ಮೂಲ ದಾವೆ ನಂ-164/2024 ರೊಂದಿಗೆ ಒಟ್ಟುಗೂಡಿಸುವ ಅವಶ್ಯಕತೆ ಇರುವುದಿಲ್ಲ. ಕಾರಣ ಈ ಮಧ್ಯಂತರ ಅರ್ಜಿಯು ಪುರಸ್ಕರಿಸುವಂತಹದು ಅಲ್ಲ. ಅಲ್ಲದೆ, ಕಾನೂನು ಹಾಗೂ ನ್ಯಾಯದ ಹಿತದೃಷ್ಟಿಯಿಂದಲೂ ಸಹ ಈ ಮಧ್ಯಂತರ ಅರ್ಜಿ ಪುರಸ್ಕರಿಸುವಂತಹದು ಅಲ್ಲ. ಆದ್ದರಿಂದ, ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ಅರ್ಜಿದಾರ/ ವಾದಿ ತೋರಿಸಿಲ್ಲವಾದ ಕಾರಣ, **ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

**11.** **ಅಂಶ-2** – ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

**ಆದೇಶ**

ಅರ್ಜಿದಾರ/ವಾದಿ ದಿವಾಣಿ ಪ್ರಕ್ರಿಯಾ ಸಂಹಿತೆ ಕಲಂ 151 ರ ಅಡಿಯಲ್ಲಿ ಸಲ್ಲಿಸಿರುವ, ಮಧ್ಯಂತರ ಅರ್ಜಿ ಸಂಖ್ಯೆ-10 ನ್ನು 100/- ರೂಗಳ ಖರ್ಚಿನ ಮೇಲೆ ವಜಾಗೊಳಿಸಲಾಗಿದೆ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ **8 ನೇ ಸೆಪ್ಟಂಬರ್ 2025** ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

**(ವೈ. ಕೆ. ಬೇನಾಳ),**
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**
**ಹೊಸದುರ್ಗ.**